ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸ್ವಾಮಿ, ಇದನ್ನು ಇನ್ನು ಎಷ್ಟು ದಿವಸಗಳಲ್ಲಿ ಕಳುಹಿಸಿಕೊಡಲು ಏರ್ಪಾಡು ಮಾಡುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಅದಷ್ಟು ಜಾಗ್ರತೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ನಾನು ಕೇಳಿದ್ದು ಈ ಅಂದಾಜನ್ನು ಸರ್ಕಾರದವರು ಬೇಗ ಮಂಜೂರು ಮಾಡುತ್ತೀರಾ ಎಂದು ?

ಶ್ರೀ ಟಿ. ಚನ್ನಯ್ಯ.—ಆ ಬಗ್ಗೆ ನೂಕ್ತ ಕಾರ್ಯ ಕ್ರಮಗಳನ್ನು ಜರೂರಾಗಿ ಕೈಗೊಳ್ಳಲಾಗುವುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇನ್ನು ಒಂದೆರಡು ತಿಂಗಳೊಳಗಾಗಿ ಆದರೂ ಈ ಕೆಲಸವನ್ನು ಮುಗಿಸಲು ಸರ್ಕಾರದವರಿಗೆ ಸಾಧ್ಯವಾಗುತ್ತದೆಯೇ ?

ಶ್ರೀ ಟಿ. ಚನ್ನಯ್ಯ.—ಆಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಂಚರಣೆಯ ಕಾಲದಲ್ಲಿ ಅಲ್ಲಿಗೆ ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ರೆವಿನ್ಯೂ ಮಂತ್ರಿಗಳೂ ಸ್ವಳಕ್ಕೆ ದಯಾಮಾಡಿಸಿದ್ದಂಥ ಕಾಲದಲ್ಲಲ್ಲ ಜನರು ಪ್ರಾರ್ಥಿಸಿಕೊಂಡಿದ್ದರ ಮೇಲೆ ಈ ಉಭಯ ಸಚಿವರುಗಳೂ ಸರ್ಕಾರದವರು ಆ ಕೆಲಸದ ಬಗ್ಗೆ ತಮ್ಮ ಸಹಾನುಭೂತಿ ಇದೆಯೆಂದೂ—ಆ ಕೆಲಸವನ್ನು ಸರ್ಕಾರದಿಂದಲೇ ಮಾಡಿಸಿಕೊಡುವುದಾಗಿಯೂ ಅವರು ಕೊಟ್ಟಂಥ ಭರವಸೆಗಳು ಇಲಾಖೆಯ ಮುಖ್ಯಾಧಿಕಾರಿಗಳಾದ ಚೀಫ್ ಇಂಜಿನಿಯರ್ ಅವರ ಗಮನಕ್ಕೆ ಹೋಗುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಗಮನಕ್ಕೆ ಬರುತ್ತವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಾಗಾದರೆ ಅದರ ಬಗ್ಗೆ ಅವರೇನೂ ಸರ್ಕಾರಕ್ಕೆ ಶಿಫಾರ್ಸನ್ನು ಮಾಡಿಲ್ಲವೇ ?

Sri Kadidal MANJAPPA.—With your permission, I want to say this. Some of these roads are either District Board roads, or Village Panchayat roads.

Mr. SPEAKER.—This is a District Board road.

Sri Kadidal MANJAPPA.—The District Board authorities have to find money for this purpose. That is the difficulty.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮಾನ್ಯ ರೆವಿನ್ಯೂ ಮಂತ್ರಿಗಳವರು ಆ ಕೆರೆಯ ಹಿಂದಿನ ಅಚ್ಚುಕಟ್ಟು ಸರ್ಕಾರದವರಿಗೆ ಸೇರಿರುವುದರಿಂದ ಆ ಕೆಲಸವನ್ನು ಸರ್ಕಾರದಿಂದ ನಾನೇ ಮಾಡಿಸಿಕೊಡುತ್ತೇನೆಂದು ಹೇಳಿರಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಷ್ಟು ಸಹಾನುಭೂತಿಯಿಂದ ಪರಿಶೀಲನೆಮಾಡುತ್ತೇನೆಂದು ಮಾತ್ರ ಹೇಳಿದ್ದೆ. There is one difficulty. The amount cannot be spent out of the allotment intended for '50 Civil Works'.

ಶ್ರೀ ಬಿ. ಹುಚ್ಚೇಗೌಡ.—ಹೀಗೆ ಒಂದು ಸೇತುವೆಯ ಕೆಲಸಕ್ಕಾಗಿ 75 ಸಾವಿರ ಒಂದು ಲಕ್ಷ ಹಣ ಖರ್ಚು ಆಗುತ್ತದೆಂದು ಹೇಳುವಾಗ ಅದನ್ನು ಮಾಡಿಸಲು ಜಿಲ್ಲಾ ಬೋರ್ಡುಗಳಿಗೆ ಸಾಧ್ಯವಾಗುತ್ತದೆಯೇ ?

Mr. SPEAKER.—That is a matter of opinion But within the provisions of the Account Code or within the provisions of the rules of the District Board and the Government which authority should take up the road is the question.

ಶ್ರೀ ಬಿ. ಹುಚ್ಚೇಗೌಡ.—ಈಗ ಸರ್ಕಾರದವರು ತಾವು ಈ ರಸ್ತೆಯನ್ನು ಮಾಡಿಸುತ್ತೇವೆಂದು ಹೇಳಿ ಅದರ ಬಗ್ಗೆ ಅಂದಾಜನ್ನು ತರಿಸಿಕೊಂಡಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ತರಿಸಿಕೊಂಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಈ ಕೆಲಸವನ್ನು ಸರ್ಕಾರ ತಾನೇ ಮಾಡಬೇಕಾಗಿರುವುದು ?

ಶ್ರೀ ಟಿ. ಚನ್ನಯ್ಯ.—ಇಲ್ಲ. ಈ ಕೆಲಸವನ್ನು ಜಿಲ್ಲಾ ಬೋರ್ಡಿನವರೂ ಮಾಡಬೇಕಾದದ್ದು. ಜಿಲ್ಲಾ ಬೋರ್ಡಿನವರು ತಮ್ಮ ಭಾಗದ ಖರ್ಚನ್ನು ವಹಿಸಿಕೊಳ್ಳಲು ಮುಂದೆ ಬರುವುದಾದರೆ ಆನಂತರ ಸರ್ಕಾರದವರು ಆಲೋಚನೆ ಮಾಡಬಹುದು.

ಶ್ರೀ ಸೋಲೂರು ಸಿದ್ದಪ್ಪ.—ಇಂಥ ಕೆಲಸಗಳಿಗೆಲ್ಲಾ ಮೊದಲು ಬಜೆಟ್ಟಿನಲ್ಲಿ ಹಣ ಒದಗಿಸಿತಾನೆ ಆನಂತರ ಈ ಕೆಲಸವನ್ನು ಪ್ರಾರಂಭ ಮಾಡುವುದು ?

Mr. SPEAKER.—It concerns only to a particular bridge.

ಶ್ರೀ ಡಿ. ದೇವರಾಜ ಅರಸ್.—ಅದು ಸರಿ. ನನ್ನ ಪ್ರಶ್ನೆ ಸಹಾನುಭೂತಿಯಿಂದ ಪರಿಶೀಲನೆ ಮಾಡಲಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಆ ಸಹಾನುಭೂತಿ ಇಲ್ಲದ ಕಡೆ ಯಾವ ಕೆಲಸವೂ ಆಗುವುದಿಲ್ಲವೆಂಬುದು ಅವರ ಅರ್ಥವೋ ?

ಶ್ರೀ ಟಿ. ಚನ್ನಯ್ಯ.—ಆ ಸಹಾನುಭೂತಿ ಎಲ್ಲಾ ಕಡೆಗೂ ಇರುತ್ತದೆ.

President, Arasikere Municipality (Misappropriation of amounts by).

Q.—648. Sri K. PANCHAKSHARIAH (Arasikere).—

Will the Government be pleased to state :—

(*a*) whether any complaint has been made that the President of the Municipality of Arasikere has taken bribes or that he has misappropriated the funds of the Municipality ;

(*b*) whether enquiries have been made in this behalf ;

(*c*) whether it has come to their notice that the abovesaid President has acted contrary to the Government Orders and provision of the Act ?

A.—Sri T. CHANNIAH (Minister for Public Health and Local Self-Government).—

(*a*) Yes, complaints of irregular practices have been received.

(*b*) Yes.

(*c*) The matter is under investigation.

ಶ್ರೀ ಕೆ. ಪಂಚಾಕ್ಷರಯ್ಯ.—ತಾವು ಇಲ್ಲಿ ಈಗ ಇರ್ರೆಗುಲ್ಯಾರಿಟೀಸ್ ಎಂದು ಹೇಳಿದ್ದೀರಲ್ಲಾ ಅವು ಯಾವ ಯಾವವು? ಇಲ್ಲಿ ತಾವು complaints of irregular practices have been received ಎಂದು ಹೇಳಿದ್ದೀರಿ. ಇವುಗಳೇನು? ಇವುಗಳು ಯಾವ ತರಹೆಯವು ಎಂಬುದನ್ನು ಹೇಳಬಲ್ಲಿರಾ?

ಶ್ರೀ ಟಿ. ಚನ್ನಯ್ಯ.—ಆ ವಿವರಗಳನ್ನೆಲ್ಲಾ L.S.G. ಕಮೊಷನರ್ ಅವರಿಗೆ ವಿಚಾರಣೆ ಬಗ್ಗೆ ಕಳುಹಿಸಿಕೊಡಲಾಗಿದೆ. ಆದ್ದರಿಂದ ಅವುಗಳು ಏನೇನು ಎಂಬುದನ್ನು ಈಗ ವಿಶದವಾಗಿ ತಿಳಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಆ ಇರ್ರೆಗ್ಯುಲ್ಯಾರಿಟೀಸ್ ಏನೇನು ಎಂಬ ಬಗ್ಗೆ ಸರ್ಕಾರಕ್ಕೆ ವರದಿಬಂದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಬಂದಿವೆ. ಆದರೆ ಅವುಗಳನ್ನೆಲ್ಲಾ ಈಗ ಕಮೊಷನರ್ ಅವರಿಗೆ ಕಳುಹಿಸಲಾಗಿದೆ. ಅವುಗಳೆಲ್ಲಾ ವಿಚಾರಣೆ. ಆದನಂತರ ನಮಗೆ ಹಿಂದಕ್ಕೆ ಬರುತ್ತವೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ದೂರುಗಳೆಲ್ಲಾ ಸರ್ಕಾರಕ್ಕೆ ಬಂದದ್ದು ಯಾವಾಗ?

ಶ್ರೀ ಟಿ. ಚನ್ನಯ್ಯ.—ಸರ್ಕಾರಕ್ಕೆ ಬಂದಿವೆ. ಆದರೆ ಖಚಿತವಾಗಿ ತಾರೀಖನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಹೋಗಲಿ, ಯಾವ ತಿಂಗಳಿನಲ್ಲಿ ಸರ್ಕಾರಕ್ಕೆ ಬಂದಿತೆಂದು ಹೇಳುವುದಕ್ಕಾದರೂ ಆಗುತ್ತದೆಯೇ?

ಶ್ರೀ ಟಿ. ಚನ್ನಯ್ಯ.—1954 ರಲ್ಲಿ—ಅಂದರೆ ಹೋದವರ್ಷ ಸರ್ಕಾರಕ್ಕೆ ತಿಳಿದುಬಂದಿದೆ ಎಂದು ಒಟ್ಟಿನಲ್ಲಿ ಹೇಳಬಹುದು.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗಾದರೆ ಈ ವಿಷಯ ತಮ್ಮ ಗಮನಕ್ಕೆ ಇಲ್ಲಿಗೆ ಒಂದು ವರ್ಷದ ಕೆಳಗೇ ಬಂದಿದ್ದರೂ, ಸಾರ್ವಜನಿಕರ ಹಣ ಹೀಗೆ ದುರುಪಯೋಗವಾದುದರ ಬಗ್ಗೆ ಸರ್ಕಾರ ಸೂಕ್ತಕಾರ್ಯಕ್ರಮಕ್ಕೆ ಗೊಳ್ಳಲು ಇನ್ನೂ ಕಾಲ ಸಾಕಾಗಿಲ್ಲವೇ?

ಅಧ್ಯಕ್ಷರು.—ಅವುಗಳನ್ನು ವಿಚಾರಣೆ ಮಾಡಲು ಕಾರ್ಯಕ್ರಮಗಳನ್ನು ಕೈಗೊಂಡಿರುವುದಾಗಿ ಆಗಲೇ ತಿಳಿಸಿರುತ್ತಾರೆ. ಆ ವರದಿ ಬಂದನಂತರ ಮುಂದಿನ ನಡೆವಳಿಕೆಗಳನ್ನು ನಡೆಸುತ್ತಾರೆ.

ಶ್ರೀ ಕೆ. ಪಂಚಾಕ್ಷರಯ್ಯ.—ಆ ಮುನಿಸಿಪಾಲಿಟಿಗೆ ಬೇಕಾಗತಕ್ಕಂಥ ಕಬ್ಬಿಣ, ಸಿಮೆಂಟ್ ಇತ್ಯಾದಿ ಅನೇಕ ಸಾಮಾನುಗಳನ್ನು ಇಲ್ಲಿಯೇ ಅಂದರೆ ಬೆಂಗಳೂರಿನಲ್ಲಿಯೇ ಕೊಂಡುಪುಗಳನ್ನೆಲ್ಲಾ ಇಲ್ಲೇ ಲಾಭಕ್ಕೆ ಮಾರಾಟ ಮಾಡಿಬಿಟ್ಟು ಹೋಗಿರತಕ್ಕಂಥ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚೆನ್ನಯ್ಯ.—ಆ ಆಪಾದನೆಗಳ ಬಗ್ಗೆ ಎಲ್ಲಾ ವಿಚಾರಣೆಮಾಡಿ ಸರ್ಕಾರಕ್ಕೆ ಒಂದು ವರದಿ ಕಳುಹಿಸಬೇಕೆಂದು ಅವುಗಳನ್ನು ಕಮೊಷನರ್ ಕಡೆಗೆ ಕಳುಹಿಸಲಾಗಿದೆ. ಆದರೆ ಅವರಿಂದ ನಮಗಿನ್ನೂ ರಿಪೋರ್ಟ್ ಬಂದಿಲ್ಲ. ಬಂದನಂತರ ಅದೆಲ್ಲಾ ಗೊತ್ತಾಗುತ್ತದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕರೆ ಟೌನಿಗೆ ಬೇಕಾಗಿದ್ದಂಥ ಕ್ವೆನ್ಸೆನ್ ಮತ್ತು ಲೋಷ್ಠ ಇತ್ಯಾದಿಗಳನ್ನೆಲ್ಲಾ 3ನೇ ದರ್ಜೆಗೆ ಸೇರಿರತಕ್ಕವುಗಳನ್ನು ಕೊಂಡಿದ್ದಾಗ್ಗೂ ಪ್ರಥಮ ದರ್ಜೆಗೆ ಸೇರಿರುವಂಥ ಸಾಮಾನುಗಳಿಗೇನು ಬೆಲೆಯಿತ್ತೋ ಆ ಬೆಲೆಯನ್ನೇ ಈಗ ಅವರು ಈ 3ನೇ ಕ್ವಾಲಿಟಿ ಸಾಮಾನುಗಳಿಗೂ ಖರ್ಚುಹಾಕಿರತಕ್ಕದ್ದು ತಪ್ಪು ಅವಗಾಹನೆಗೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಈ ಅಂಶಗಳನ್ನೆಲ್ಲಾ ಈಗ ಅವರು ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ.

Sri M. PALANIYAPPAN.—I rise to a point of order. The Hon'ble Minister was pleased to say that the matter is under consideration. Is it proper now to discuss the matter on the floor of the House?

Mr. SPEAKER.—There is no point of order.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಫೆನಾಯಿಲ್ ದುರುಪಯೋಗದ ಬಗ್ಗೆ ಡೆಪ್ಯುಟಿಕಮೊಷನರ್ ಅವರು ಸ್ವಳಕ್ಕೆ ಖುದ್ದಾಗಿ ಬಂದು ಆ ಕೊಠಡಿಯನ್ನು ಬೀಗಹಾಕಿ, ಸೀಲ್‌ಮಾಡಿ, ಮಹಜರ್ ಮಾಡಿಕ್ಕೊಂಡು ಹೋಗಿರುವ ವಿಷಯ ಮತ್ತು ಅವರು ವಿಚಾರಣೆ ಮಾಡಿರತಕ್ಕಂಥ ವಿಷಯ ಇವೆಲ್ಲ ತಮ್ಮ ಗಮನಕ್ಕೆ ಬಂದಿವೆಯೇ?

ಅಧ್ಯಕ್ಷರು.—ಆ ಬಗ್ಗೆ ವಿಶದವಾಗಿ ಎಲ್ಲವನ್ನೂ ವಿಚಾರಣೆ ಮಾಡಿ ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸುವಂತೆ ಆ ಆಪಾದನೆಗಳ ಅರ್ಜಿಯನ್ನು ಕಮೊಷನರ್ ಕಡೆಗೆ ಕಳುಹಿಸಲಾಗಿದೆಯೆಂದು ಅವರು ಆಗಲೇ ತಿಳಿಸಿದ್ದಾರಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಹೋದ ತಿಂಗಳು no confidence motion move ಮಾಡಿ ಅಧ್ಯಕ್ಷರನ್ನು ತೆಗೆದು ಹಾಕಿದ ಮೇಲೆ. . .

ಅಧ್ಯಕ್ಷರು.—ಅದೆಲ್ಲ ಇದಕ್ಕೆ ಸಂಬಂಧಪಟ್ಟುದಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಅಕ್ರಮಗಳು ನಡೆದಿವೆಯೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಚನ್ನಯ್ಯ.—ತಾವು ಕೇಳುವ ಪ್ರಶ್ನೆ ಇದಕ್ಕೆ ಸಂಬಂಧಪಟ್ಟಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕರೆ ಮುನಿಸಿಪಲ್ ಹೈಸ್ಕೂಲಿಗೆ ಮುನಿಸಿಪಲ್ ಕೋಟಾದಮೇಲೆ ಹಣವನ್ನು ಖರ್ಚುಮಾಡಬಾರದು, ಸರ್ಕಾರದ ಗ್ರಾಂಟು ತೆಗೆದುಕೊಳ್ಳಬೇಕೆಂದು ಹೇಳಿದಮೇಲೆ ಎಷ್ಟು ಹಣವನ್ನು ಪೈಸಿಡೆಂಟರು ಡ್ರಾ ಮಾಡಿದ್ದಾರೆ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

Sri R. ANANTARAMAN.—What is the name of the Municipal President, Sir?

Sri T. CHANNIAH.—Sri Siddappa.

Sri R. ANANTARAMAN.—Is it on the complaint of the Councillors of the Municipal Council that action has been taken?

Sri T. CHANNIAH.—Two Municipal Councillors have made certain allegations against the President of the Town Municipal Council, Arasikere.

Sri R. ANANTARAMAN.—What action do you intend taking after the enquiry?

Mr. SPEAKER.—That is a hypothetical question.

ಶ್ರೀ ಎಸ್. ಗೋಪಾಲಗೌಡ.—ಅರಸೀಕೆರೆ ಪುರಸಭಾಧ್ಯಕ್ಷರ ಮೇಲೆ ಲಂಚ ತೆಗೆದುಕೊಂಡರು ಅಥವಾ ಮುನಿಸಿಪಾಲಿಟಿಯ ಹಣವನ್ನು ದುರುಪಯೋಗ

ಮಾಡಿದರು ಎಂದು ಸರ್ಕಾರಕ್ಕೆ ದೂರು ಕೊಟ್ಟವರಾರು ?

ಶ್ರೀ ಟಿ. ಚನ್ನಯ್ಯ.—ಶ್ರೀ ಬಸವರಾಜ್ ಮತ್ತು ವಿಶ್ವನಾಥ್ ಎಂಬವರು.

ಶ್ರೀ ಎಸ್. ಗೋಪಾಲಗೌಡ.—ಇಬ್ಬರೂ ಸೇರಿ ಕೊಟ್ಟಿದ್ದಾರೆಯೆ ದೂರನ್ನು ?

ಶ್ರೀ ಟಿ. ಚನ್ನಯ್ಯ.—ಬೇರೆ ಬೇರೆ ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಬೇರೆ ಬೇರೆ ಅರ್ಜಿಗಳನ್ನು ಬರೆದಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಬಸವರಾಜ್ ಎಂಬವರು ಸರ್ಕಾರಕ್ಕೆ ದೂರು ಕೊಟ್ಟಿದ್ದಾರೆ, ವಿಶ್ವನಾಥ್ ಎಂಬವರು ಡೆಪ್ಯುಟಿಕಮೀಷನರಿಗೆ ದೂರು ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಅವರಿಬ್ಬರೂ ಕೌನ್ಸಿಲ್‌ಗೆ ಆರಿಸಿ ಬಂದಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಸ್. ಗೋಪಾಲಗೌಡ.—ಅವರು ಯಾವ ಪಕ್ಷಕ್ಕೆ ಸೇರಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ಗೊತ್ತಿಲ್ಲ.

Mr. SPEAKER.—He cannot say that.

ಶ್ರೀ ಎಸ್. ಗೋಪಾಲಗೌಡ.—ಅವರಿಬ್ಬರನ್ನೂ ಕೌನ್ಸಿಲಿನಿಂದ ತೆಗೆದುಹಾಕಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಒಂದು ತೀರ್ಮಾನವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಬೇರೆ dispute ಇದೆ.

ಶ್ರೀ ಎಸ್. ಗೋಪಾಲಗೌಡ.—ಆ ರೀತಿ ತೆಗೆದು ಹಾಕಿದಮೇಲೆ ತಾನೆ ಅವರು ದೂರು ಕೊಟ್ಟಿರುವುದು ?

ಶ್ರೀ ಟಿ. ಚನ್ನಯ್ಯ.—ಇನ್ನೂ ಮುಂಚೆಯೇ ದೂರು ಕೊಟ್ಟಿದ್ದರು.

ಶ್ರೀ ಎಸ್. ಗೋಪಾಲಗೌಡ.—ಈ ರೀತಿ ಪೌರ ಸಭೆಯಲ್ಲಿ ತಪ್ಪು ನಡೆದುಕೊಂಡಿದ್ದಾರೆಂದು ಚರ್ಚೆ ನಡೆದು ನಿರ್ಣಯಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ನಿರ್ಣಯ ಆಗಿದೆ.

ಶ್ರೀ ಎಸ್. ಗೋಪಾಲಗೌಡ.—ಇಂಥ ನಿರ್ಣಯಗಳನ್ನು ಪಾನು ಮಾಡಿದ್ದಾರೆಯೆ ? ಪೌರ ಸಭಾಧ್ಯಕ್ಷರ ಮೇಲೆ ಲಂಚದ ಆಪಾದನೆ ಮಾಡಿ ಮತ್ತು ಪೌರ ನಧೆಯ ಹಣವನ್ನು ದುರುಪಯೋಗಪಡಿಸಿದ್ದಾರೆಂದು ನಿರ್ಣಯವನ್ನು ಪಾನು ಮಾಡಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಆ ರೀತಿ ನಿರ್ಣಯ ಮಾಡಿಲ್ಲ, ಆದರೆ ಸರಬರಾಜು ಮಾಡತಕ್ಕ materials ವಿಷಯದಲ್ಲಿ ಅನುಮಾನ ಬಂದು ಚರ್ಚೆ ಮಾಡಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ, ಸಿದ್ದಪ್ಪನವರು ತಮ್ಮ ಪಾರ್ಟಿಗೆ ವಿರೋಧವಾಗಿದ್ದಾರೆಂದು ತಾನೆ ಈ ರೀತಿ ದೂರುಮಾಡಿರುವುದು ?

ಶ್ರೀ ಟಿ. ಚನ್ನಯ್ಯ.—ಅಭಿಪ್ರಾಯದ ಮಾತು.

ಶ್ರೀ ಜಿ. ದುಗ್ಗಪ್ಪ.—ದೂರು ಕೊಟ್ಟಿರುವ ಸದಸ್ಯರು ಹಿಂದೆ ತಾವು ಸದಸ್ಯರಾಗಿರಬೇಕಾದರೆ, ರಾಜೀನಾಮೆ ಕೊಟ್ಟಿದ್ದಾರೆಯೆ ?

Mr. SPEAKER.—That does not arise. If it is a matter which requires investigation, they will do it.

ಶ್ರೀ ಜಿ. ದುಗ್ಗಪ್ಪ.—ದೂರು ಕೊಟ್ಟಿರುವವರು ಹಿಂದೆ ತಮ್ಮ ಕೌನ್ಸಿಲರ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರೆ ?

ಶ್ರೀ ಟಿ. ಚನ್ನಯ್ಯ.—ಕೌನ್ಸಿಲ್‌ಗೆ ರಾಜೀನಾಮೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ, ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ. ಅದು disputeನಲ್ಲಿದೆ.

ಶ್ರೀ ಜಿ. ದುಗ್ಗಪ್ಪ.—ರಾಜೀನಾಮೆ ಅಂಗೀಕಾರವಾದ ಮೇಲೆ ದೂರು ಕೊಟ್ಟಿರುವರೆ ?

ಶ್ರೀ ಟಿ. ಚನ್ನಯ್ಯ.—ಮುಂಚಿತವಾಗಿ ಕೊಟ್ಟಿದ್ದಾರೆ.

Mr. SPEAKER.—I think we should go to the next question. For such a small question I do not think that we should take up so much time.

ಶ್ರೀ ಬಿ. ಹುಚ್ಚೇಗೌಡ.—ಅವರು ಅಧ್ಯಕ್ಷರಾದ ಮೇಲೆ ಮುನಿಸಿಪಲ್ ತೆರಿಗೆ ವಗ್ಗೆರೆಯ ವನೂಲೆ ಕಟ್ಟುನಿಟ್ಟಾಗಿ ಮಾಡಿದುದಕ್ಕಾಗಿ ಅಲ್ಲಿನ ವರ್ತಕರು ಸೇರಿ ದೂರು ಕೊಟ್ಟಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಗೊತ್ತಿಲ್ಲ.

Sri G. SIVAPPA.—Is it not a fact that there are two rival groups in the Municipal Council ?

Sri T. CHANNIAH.—Yes, there are.

Sri J. MOHAMED IMAM.—I rise to a point of order, Sir. I think the matter is *sub judice*.

Mr. SPEAKER.—I do not think it is so. It is only under investigation.

Sri J. MOHAMED IMAM.—No, Sir, this matter is before the High Court.

Mr. SPEAKER.—I am sorry, I did not know. Then I do not allow any questions to be put.

Estimates Committee Report.

Q.—49. Sri B. NARAYANASWAMY (Mysore South).—

Will the Government be pleased to state :—

the action taken on the report of the Estimates Committee placed before the House during the last Sessions ?

A.—Sri Kadidal MANJAPPA (Minister for Revenue and Public Works).—

It is under examination in consultation with the Chief Engineer.

Sri B. NARAYANASWAMY.—I have no supplementaries.

Foot bridge across the Cauvery near Sivasamudram.

Q.—130. Sri B. P. NAGARAJAMURTHY (Malavalli).—

Will the Government be pleased to state :—